# Yendu Kambeno Panduranga

**Kannada lyrics on top, English singing lyrics below**

## Kannada

ಎಂದು ಕಾಂಬೆನೋ ಪಾಂಡುರಂಗ ಮೂರುತಿಯಾ ||2||ಇಂದುಭಾಗನಿವಾಸ ನರನ ಸಾರಥಿಯ || ಎಂದು ||

ಅರುಣಾಬ್ಜೋಪಮ ಚಾರು ಚರಣಾಂಗುಲಿ ನಖರತರುಣೇಂದುಚ್ಛವಿ ತಿರಸ್ಕರಿಸುವ ಪ್ರಖರ ||2||ಕಿರುಗೆಜ್ಜೆ ಕಡಗ ನೂಪುರ ಪೆಂಡೆ ಶಫರತೆರೆಜಂಘೆ ಜಾನು ಭಾಸುರ ರತ್ನ ಮುಕುರ || ಎಂದು ||

ರಂಭಾ ಪೋಲುವ ಊರು ಪೊಂಬಣ್ಣಾಂಬರವಕುಂಭೀಮಸ್ತಕದೊಳ್ ನಿತಂಬದಿ ಪೊಳೆವ ||2||ಕಂಬುಮೇಖಳಕಂಜ ಗಂಭೀರ ನಾಭೀಅಂಬುಧಿಶಾಯಿ ವಿಧಿ ಶಂಭು ಪೂಜಿತನ || ಎಂದು ||

ಪದಕ ಸರಿಗೆಯು ಜಾಂಬೂನದ ಕಂಬುಕಂಠರದನೀಕರ ಬಾಹು ಚೆದುರ ಭುಜಕೀರ್ತಿ ||2||ಬದರಸಂಕಾಶಾ ಅಂಗದ ರತ್ನ ಕಟಕಾಪದುಮಾ...ರುಣಕರಯುಗ್ಮ ಕಟಿಯಲ್ಲಿಟ್ಟವನಾ || ಎಂದು ||

ತಾಲಿತಾಕುಂಡಲ ಕರ್ಣ ಸುಲತಾ ಭ್ರೂಯುಗಳಲಲಿತಾ ಬಾಲ ಶಶಾಂಕ ತಿಲಕಾಂಕಿತ ಫಾಲ ||2||ಅಳಿಜಾಲವೆನಿಪ ಕುಂತಳ ರತ್ನ ಖಚಿತಕಲಧೌತಮಕುಟ ದಿಗ್ವಲಯ ಬೆಳಗುವನ || ಎಂದು ||

ಶಠಕೂರ್ಮರೂಪಿಯ ಕಿಟ ಮಾನವ ಹರಿಯಾವಟುಭಾರ್ಗವ ಕಾಕುಸ್ಥ ಶಠಕಂಸಧ್ವಂಸೀಯ ||2||ನಿಟಿಲಾಂಬಕ ಸಹಾಯ ಖಳಕಟಕಾರಿ ಭೀಮಾತಟವಾಸ ಜಗನ್ನಾಥವಿಠ್ಠಲನಾಕೃತಿಯ || ಎಂದು ||

---

## English

Emdu kaambeno paamduramga moorutiyaa | ||2|| | imdubhaaganivaasa narana saarathiya || emdu ||

Arunaabjopama chaaru charanaamguli nakharatarunemduchchhavi tiraskarisuva prakhara | ||2|| | kirugejje kadaga noopura pemde shapharaterejamghe jaanu bhaasura ratna mukura || emdu ||

Rambhaa poluva ooru pombannaambaravakumbheemastakadol nitambadi poleva | ||2|| | kambumekhalakamja gambheera naabheeambudhishaayi vidhi shambhu poojitana || emdu ||

Padaka sarigeyu jaamboonada kambukamtharadaneekara baahu chedura bhujakeerti | ||2|| | badarasamkaashaa amgada ratna katakaapadumaa…runakarayugma katiyallittavanaa || emdu ||

Taalitaakumdala karna sulataa bhrooyugalalalitaa baala shashaamka tilakaamkita phaala | ||2|| | alijaalavenipa kumtala ratna khachitakaladhautamakuta digvalaya belaguvana || emdu ||

Shathakoormaroopiya kita maanava hariyaavatubhaargava kaakustha shathakamsadhvamseeya | ||2|| | nitilaambaka sahaaya khalakatakaari bheemaatatavaasa jagannaathaviththalanaakrutiya || emdu ||